KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

NAAC Accredited
'A' Grade 2014

website: kud.ac.in

Tele: 0836-2215224
e-mail: academic.st@kud.ac.in
Pavate Nagar, Dharwad-580003
ಪಾವಟೆ ನಗರ, ಧಾರವಾಡ – 580003

No.KU/Aca(S&T)/RIH-194/2020-21/ 74

Date: 12 JUN 2020

## ಸುತ್ತೋಲೆ

ವಿಷಯ: 2020–21ನೇ ಶೈಕ್ಷಣಿಕ ಸಾಲಿನಿಂದ ಎಲ್ಲ ಸ್ನಾತಕ ಕೋರ್ಸಗಳಿಗೆ ಸಿ.ಬಿ.ಸಿ.ಎಸ್. ಮಾದರಿ ಪಠ್ಯಕ್ರಮವನ್ನು ಅಳವಡಿಸುತ್ತಿರುವ ಕುರಿತು.

ಉಲ್ಲೇಖ: 1. ವಿದ್ಯಾವಿಷಯಕ ಪರಿಷತ್ ಸಭೆ ಠರಾವು ಸಂ. 02, ದಿನಾಂಕ 21.05.2020.

2. ಸರ್ಕಾರಕ್ಕೆ ಸಲ್ಲಿಸಲಾದ ಪತ್ರ ಸಂ. KU/Aca(S&T)/RIH-194/2020-21/71, ದಿನಾಂಕ 08.06.2020.

3. ಮಾನ್ಯ ಕುಲಪತಿಗಳ ಆದೇಶ ದಿನಾಂಕ

-----

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, 2020–21ನೇ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ವಿಶ್ವವಿದ್ಯಾಲದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳಲ್ಲಿ ಎಲ್ಲ ಸ್ನಾತಕ ಕೋರ್ಸುಗಳು 1 ರಿಂದ 6ನೇ ಸೆಮಿಸ್ಟರ್‌ಗಳಿಗೆ ಹಾಗೂ (1 ರಿಂದ 8ನೇ ಸೆಮಿಸ್ಟರ್‌ಗಳಿಗೆ ಸಂಬಂಧಪಟ್ಟ ಕೋರ್ಸುಗಳಿಗೆ) ಸಿ.ಬಿ.ಸಿ.ಎಸ್ ಮಾದರಿಯಲ್ಲಿ ಪಠ್ಯಕ್ರಮವನ್ನು ಅಳವಡಿಸಲಾಗುವುದು. ಸದರಿ ಸ್ನಾತಕ ಕೋರ್ಸುಗಳ ಪಠ್ಯಕ್ರಮವನ್ನು ಮಾನ್ಯ ಕುಲಾಧಿಪತಿಗಳ ಅನುಮೋದನೆಯನ್ನು ಕಾಯ್ದಿರಿಸಿ ಅಳವಡಿಸಲಾಗುವುದು.

ಮುಂದುವರೆದು, 2020–21ನೇ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಡಿಯಲ್ಲಿ ಬರುವ ಎಲ್ಲ ಸ್ನಾತಕ ಕೋರ್ಸುಗಳ 1 ರಿಂದ 6ನೇ ಸೆಮಿಸ್ಟರ್‌ಗಳಿಗೆ ಹಾಗೂ (1 ರಿಂದ 8ನೇ ಸೆಮಿಸ್ಟರ್‌ಗಳಿಗೆ ಸಂಬಂಧಪಟ್ಟ ಕೋರ್ಸುಗಳಿಗೆ) ಸಿ.ಬಿ.ಸಿ.ಎಸ್. ಪಠ್ಯಕ್ರಮ ಹಾಗೂ ವಿನಿಯಮಾವಳಿಗಳನ್ನು ಮುಂದಿನ ದಿನಗಳಲ್ಲಿ ಕ.ವಿ.ವಿ. ವೆಬ್‌ಸೈಟ್ ಮುಖಾಂತರ ಪೂರೈಸಲಾಗುವುದು. ಅದರಂತೆ ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಸದರ ವಿಷಯಕ್ಕೆ ಸಂಬಂಧಿಸಿದಂತೆ ಸಿ.ಬಿ.ಸಿ.ಎಸ್. ಪದ್ಧತಿ ಅನುಸರಿಸಲು ಸೂಚಿಸಲಾಗಿದೆ.

10/06/2020
ಕುಲಸಚಿವರು

ಗೆ,

ಕರ್ನಾಟಕ ವಿಶ್ವವಿದ್ಯಾಲದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ. (ಕ.ವಿ.ವಿ. ಅಂತರ್ಜಾಲ ಹಾಗೂ ಮಿಂಚಂಚೆ ಮೂಲಕ ಬಿತ್ತರಿಸಲಾಗುವುದು)

ಪ್ರತಿ:

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
2. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
3. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಅಧೀಕ್ಷಕರು, ಪ್ರಶ್ನೆ ಪತ್ರಿಕೆ / ಗೌಪ್ಯ / ಜಿ.ಎ.ಡಿ. / ಸಂಬಂಧಿಸಿದ ಕೋರ್ಸುಗಳ ವಿಭಾಗಗಳು ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ / ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ. ಧಾರವಾಡ.